**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 54/2023**

**ಚಾ.ಸಾಃ 3, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ಕೇಶವ ಮೇಸ್ತ |
| ತಂದೆಯ ಹೆಸರು | ಶ್ಯಾಮ |
| ವಯಸ್ಸು | 50 ವರ್ಷಗಳು |
| ಉದ್ಯೋಗ | ಕಾರ್ಪೆಂಟರ್ |
| ವಾಸ್ತವ್ಯ | ಖರ್ವಾ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 03-10-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 06-03-2023 ರಂದು ಮಧ್ಯಾಹ್ನ 12-15 ರ ಸಮಯಕ್ಕೆ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾದ ವಿಚಾರವಾಗಿ ಪಂಚನಾಮೆಗೆ ಬಂದಿದ್ದು ನನ್ನನ್ನು ಮತ್ತು ಚಾಸಾ-2 ರವರನ್ನು ಪಂಚರಾಗಿ ಕರೆದಿದ್ದು ನಮ್ಮ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪೋಲಿಸರು ಸ್ಥಳ ಪಂಚನಾಮೆ ಮಾಡಿ, ಫೋಟೋ ತೆಗೆದಿರುತ್ತಾರೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಫೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಚಾಸಾ-1 ನನ್ನ ಪರಿಚಯಸ್ಥರು ಮತ್ತು ಬೇಕಾದವರು. ಪಂಚನಾಮೆಗೆ ಪೋಲೀಸರು ನಮ್ಮನ್ನು ಕರೆದಿರುತ್ತಾರೆ. ನಾನು ಚಾಸಾ-1 ರವರ ಮನೆಯ ಮುಂದೆ ನಡೆದುಕೊಂಡು ಹೋಗುತ್ತಿದ್ದಾಗ ಪೋಲೀಸರು ನನ್ನನ್ನು ಕರೆದಿರುತ್ತಾರೆ. ಪಂಚನಾಮೆಯ ಕಾಲಕ್ಕೆ ಪೋಲೀಸರು ಚಾಸಾ-1 ರವರ ಮನೆಯ ಹಂಚನ್ನು ತೆಗೆದ ಸ್ಥಳವನ್ನು ತೋರಿಸಿರುತ್ತಾರೆ. ಪಂಚನಾಮೆಯನ್ನು ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಪಂಚನಾಮೆಗೆ ಸಹಿ ಹಾಕುವಂತೆ ಪೋಲೀಸರು ಕೇಳಿದ್ದರಿಂದ ಹಾಕಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ. **ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೊನ್ನಾವರ**